**ಸಿ.ಸಿ. ಸಂ. 13 /2017**
**ಪಿಡಬ್ಲೂಃ 04**

**ಇಂದು ದಿಃ 10.03.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ. ಸಿ.ಕೆ.ಎಂ..ವಕೀಲರಿಂದಃ**

ನಮ್ಮ ಸಂಸ್ಥೆಯ ಆಡಳಿತ ವರ್ಗದಲ್ಲಿ ಯಾರು ಅಧಿಕಾರದಲ್ಲಿರುತ್ತಾರೋ ಅವರನ್ನು ಕಂಡರೆ ನನಗೆ ಭಯವಿರುತ್ತದೆ. ಸಾಕ್ಷಿಗೆ ಸಂಸ್ಥೆಯಲ್ಲಿ ಅವರಿಗೆ ಕೊಟ್ಟಿರುವ ನೇಮಕಾತಿ ಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿರುವ ಕಾರಣ ಅದನ್ನು ನಿ.ಡಿ. 24 ಎಂದು ಗುರುತಿಸಲಾಯಿತು. ನಿ.ಡಿ.24 ಅನ್ನು ವ್ಯವಸ್ಥಾಪಕ ಧರ್ಮದರ್ಶಿಗಳು ಸಹಿ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿ. ನಿ.ಡಿ.24 ರಲ್ಲಿರುವ ಸಹಿ ಗೋವಿಂದಯ್ಯನವರದ್ದಾಗಿರುತ್ತದೆ. ಈಗ ಗೋವಿಂದಯ್ಯನವರು ಮಿಳಿಂದ ವಿಧ್ಯಾಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ. ಅವರು ಅಧ್ಯಕ್ಷರಾಗಿ ಸುಮಾರು 4-5 ವರ್ಷವಾಗಿರಬಹುದು. ಸಂಸ್ಥೆಯ ಎಲ್ಲಾ ಆಡಳಿತ ಅಧ್ಯಕ್ಷರ ಕೈಯಲ್ಲಿರುತ್ತದೆ ಎಂದರೆ ಸಾಕ್ಷಿಯು ಸಂಸ್ಥೆಯ ಎಲ್ಲರ ಮೇಲಿರುತ್ತದೆ ಎಂದು ನುಡಿಯುತ್ತಾರೆ.

ಸಂಸ್ಥೆಯ ಎಲ್ಲಾ ಕಾರ್ಯಗಳು ಕಾರ್ಯದರ್ಶಿ ಮತ್ತು ಅಧ್ಯಕ್ಷರ ಹೆಸರಿನಲ್ಲಿ ನಡೆಯುತ್ತವೆ. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಂಸ್ಥೆಯಲ್ಲಿ ಶಿಕ್ಷಕರು ಮತ್ತು ಸಿಬ್ಬಂಧಿ ವರ್ಗದವರನ್ನು ನೇಮಕಾತಿ ಮಾಡಿಕೊಳ್ಳುವ ಅಧಿಕಾರವಿರುತ್ತದೆ. ಅವರಿಗೆ ಕೆಲಸಗಾರರನ್ನು ತೆಗೆದುಹಾಕುವ ಅಧಿಕಾರ ಕೂಡ ಇರುತ್ತದೆ ಎಂದರೆ ಸರಿ. ಈಗ ಹಾಲಿ ರವಿಕುಮಾರ್ ರವರು ಕಾರ್ಯಶಿಯಾಗಿ 2-3 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ನನ್ನನ್ನು ಕೆಲಸದಿಂದ ತೆಗೆದುಹಾಕುತ್ತಾರೆಂಬ ಭಯದಿಂದ ನಾನು ಅವರು ಹೇಳಿದ ಹಾಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಶಿಕ್ಷಕರು ಶಾಲೆಯ ವಾಹನದ ಖರೀದಿಗಾಗಿ ಸ್ವಯಂ ಪ್ರೇರಿತರಾಗಿ ದೇಣಿಗೆಯನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ವಾಹನದ ಖರೀದಿಗೆ ರೂ.99,500/- ಕೊಟ್ಟಿರುತ್ತೇನೆ.

ನಾವು ಶಿಕ್ಷಕರು ವಾಹನ ಖರೀದಿಗಾಗಿ ರೂ.5,67,000/- ಗಳನ್ನು ಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಅಷ್ಟು ಹಣ ನೀಡಿರುವ ಬಗ್ಗೆ ಶಾಲೆಯ ದಾಖಲೆಯ ದೃಢೀಕೃತ ನಕಲು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಒಪ್ಪಿರುವ ಕಾರಣ ಅದನ್ನು ನಿ.ಡಿ.25 ಎಂದು ಗುರುತಿಸಲಾಯಿತು. ನಿ.ಡಿ.25 ರಲ್ಲಿ ಹಣವನ್ನು ದೊಡ್ಡಣ್ಣರವರಿಗೆ ಕೊಟ್ಟಿದ್ದೇವೆ ಎಂದು ನಮೂದು ಇಲ್ಲ ಎಂದರೆ ಸರಿ. ಶಾಲೆಗೆ ಸರ್ಕಾರದಿಂದ ಅನುದಾನ ಪಡೆಯಲು ಎಲ್ಲಾ ಅಧಿಕಾರವನ್ನು ಗೋವಿಂದಯ್ಯನವರಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆರೋಪಿಯನ್ನು ಈಗ ಧರ್ಮದರ್ಶಿ ಕೆಲಸದಿಂದ ತೆಗೆದುಹಾಕಿದ್ದಾರೆ ಎಂದರೆ ಸರಿ. ಅವರನ್ನು ಕೆಲಸದಿಂದ ತೆಗೆದು ಹಾಕಿ ಈಗ್ಗೆ ಸಮಾರು 13 ವರ್ಷ ಆಗಿದೆ ಎಂದರೆ ಸರಿ. ನಾನು ಗೋವಿಂದಯ್ಯರವರ ಪರ ಸಾಕ್ಷಿ ಹೇಳದಿದ್ದರೆ ನನ್ನನ್ನು ಕೆಲಸದಿಂದ ತೆಗೆದುಹಾಕುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಂಸ್ಥೆಯ ಹಣಕಾಸಿನ ಉಸ್ತುವಾರಿ ನೋಡಿ ಕೊಳ್ಳುವ ಬಗ್ಗೆ ಕೊಟ್ಟಿರುವ ದಾಖಲೆಯನ್ನು ನಾನು ನೋಡಿಲ್ಲ. ದೊಡ್ಡಣ್ಣರವರೇ ಶಾಲೆಯ ಮುಖ್ಯಸ್ಥರು ಎಂದು ನಾನು ಭಾವಿಸಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಸಂಸ್ಥೆಯ ಯಾವುದೇ ಹಣಕಾಸಿನ ಕಾರ್ಯವನ್ನು ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಲು ಗೋವಿಂದಯ್ಯ ಮತ್ತು ಅವರ ಕಾರ್ಯದರ್ಶಿ ರವರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**